ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ ನ್ಯಾದಂ.ರವರ ನ್ಯಾಯಾಲಯ, ಹೆಚ್.ಡಿ.ಕೋಟೆ

ಸಿ.ಸಿ. ನಂ.1789/2021

ಫಿರ್ಯಾದಿ : ಸರ್ಕಾರದ ಪರವಾಗಿ ಬೀಚನಹಳ್ಳಿ ಪೋಲೀಸ್ ಠಾಣೆ

– ವಿರುದ್ಧ –

ಆರೋಪಿಗಳು : ಸುಬ್ರಮಣ್ಯ
ಬಿನ್ ಲೇಟ್ ಆರ್ಮುಗ
36 ವರ್ಷ, ವಾಸಃ ಬೀಚನಹಳ್ಳಿ ಗ್ರಾಮ
ಹೆಚ್.ಡಿ. ಕೋಟೆ ತಾಲ್ಲೂಕು
ಮೈಸೂರು ಜಿಲ್ಲೆ.

## ದೋಷಾರೋಪಣೆ

ಶ್ರೀ ಸುರೇಶ.ಎಸ್.ಎನ್., ಬಿ.ಎ., ಎಲ್.ಎಲ್.ಬಿ, ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ಹೆಚ್.ಡಿ.ಕೋಟೆ ಆದ ನಾನು ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ಬೀಚನಹಳ್ಳಿ ಪೋಲೀಸ್ ಠಾಣಾ ಸರಹದ್ದು, ಬೀಚನಹಳ್ಳಿ ಗ್ರಾಮದಲ್ಲಿರುವ ಕಬಿನಿ ನೀರಾವರಿ ಇಲಾಖೆಗೆ ಸೇರಿದ ಪ್ರದೇಶದಲ್ಲಿ ಲೇಟ್ ಕುಪ್ಪಸ್ವಾಮಿ ಎಂಬುವವರು ವಾಸವಿದ್ದ ಮನೆಯಲ್ಲಿ ಚಾ.ಸಾ.1/ಮಣಿಕಂಠ ಕೆ ಹಾಗೂ ಅವರ ಅಣ್ಣ ತಮ್ಮಂದಿರಾದ ಚಾ.ಸಾ.4 ರಿಂದ 7 ರವರು ಹಿಂದೆ ವಾಸವಿದ್ದು, ಈಗ್ಗೆ 2-3 ವರ್ಷಗಳ ಹಿಂದೆ ಕೆಲಸದ ನಿಮಿತ್ತ ಮೈಸೂರಿಗೆ ಹೋಗಿ ವಾಸವಿದ್ದು, ಬೀಚನಹಳ್ಳಿ ಗ್ರಾಮದಲ್ಲಿರುವ ತಮ್ಮ ಮನೆಗೆ ಆಗಾಗ್ಗೆ ಬಂದು ಮನೆಯ ಬಳಿಯಿದ್ದ ತೆಂಗಿನ ಮರದಲ್ಲಿ ಕಾಯಿಯನ್ನು ಕೀಳಿಸಿಕೊಂಡು ಹೋಗುತ್ತಿರುತ್ತಾರೆ.

ದಿನಾಂಕಃ 01.04.2021 ರಂದು ಮಧ್ಯಾಹ್ಣ 1.30 ಗಂಟೆ ಸಮಯದಲ್ಲಿ ಆರೋಪಿಯಾದ ನೀವು ಚಾ.ಸಾ.2/ರಾಜು ರವರನ್ನು ಬಿದರಹಳ್ಳಿ ಸರ್ಕಲ್ ನಲ್ಲಿ ಸಂಪರ್ಕಿಸಿ ತಮ್ಮ ಹಳೆಯ ಮನೆ ಮೋಟು ಗೋಡೆಯ ಸುತ್ತ ಬೆಳೆದಿರುವ ಗಿಡಗಂಟೆಗಳನ್ನು ಸ್ವಚ್ಛ ಮಾಡಿಕೊಡುವಂತೆ ಕೇಳಿದಾಗ, ಚಾ.ಸಾ.2 ರವರು ಚಾ.ಸಾ.8 ರವರ ಅನುಮತಿ ಪಡೆದು ಅವರ ಬಾಬ್ತು ಕೆಎ-45-ಎಂ-4860 ಜೆಸಿಬಿ ಯಂತ್ರವನ್ನು ತೆಗೆದುಕೊಂಡು ಹೋಗಿ ಗಿಡಗಂಟೆಗಳನ್ನು ಸ್ವಚ್ಛ ಮಾಡುತ್ತಿದ್ದಾಗ, ಆರೋಪಿಯಾದ ನೀವು ಚಾ.ಸಾ.2 ರವರಿಗೆ ಸದರಿ ಮನೆಯ ಮೊಟು ಗೋಡೆಗಳನ್ನು ಸಹ ನೆಲಸಮಗೊಳಿಸುವಂತೆ ಸೂಚಿಸಿ ನೆಲಸಮ ಮಾಡಿ ಚಾ.ಸಾ.1/ಮಣಿಕಂಠ ಕೆ ರವರಿಗೆ ನಷ್ಟ ಉಂಟು ಮಾಡಿದ್ದು, ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ. ಕಲಂ.427 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯ ಪರಿಮಿತಿಯೊಳಗೆ ಮಾಡಿರುತ್ತೀರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ಚಾ.ಸಾ.1/ಮಣಿಕಂಠ ಕೆ ರವರ ಮನೆಗೆ ಅತಿಕ್ರಮ ಪ್ರವೇಶ ಮಾಡಿ, ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ. ಕಲಂ.448 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯ ಪರಿಮಿತಿಯೊಳಗೆ ಮಾಡಿರುತ್ತೀರಿ.

ಮೂರನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಚಾ.ಸಾ.1/ಮಣಿಕಂಠ ಕೆ ರವರು ಆರೋಪಿಯಾದ ನಿಮಗೆ ಫೋನ್ ಮಾಡಿ ಕೇಳಿದಾಗ, ಆರೋಪಿಯಾದ ನೀವು ಚಾ.ಸಾ.1 ರವರಿಗೆ ಅವಾಚ್ಯ ಶಬ್ಧಗಳಿಂದ ಬೈದು ಶಾಂತಿಭಂಗವನ್ನುಂಟು ಮಾಡಿದ್ದು, ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ. ಕಲಂ.504 ಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯ ಪರಿಮಿತಿಯೊಳಗೆ ಮಾಡಿರುತ್ತೀರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ಚಾ.ಸಾ.1/ಮಣಿಕಂಠ ಕೆ ರವರಿಗೆ ಕೊಲೆ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆ ಉಂಟು ಮಾಡಿದ್ದು, ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ. ಕಲಂ.506 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯ ಪರಿಮಿತಿಯೊಳಗೆ ಮಾಡಿರುತ್ತೀರಿ.

ಈ ಮೇಲಿನ ದೋಷಾರೋಪಣೆಗಳಿಗಾಗಿ ಆರೋಪಿತರಾದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡತಕ್ಕದೆಂದು ನಿರ್ದೇಶಿಸಿರುತ್ತೇನೆ.

(ಆರೋಪಿತರಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಈ ದೋಷಾರೋಪಣೆಯನ್ನು ಓದಿ ತಿಳಿಸಿ ಹೇಳಲಾಗಿ ಸದರಿ ಆರೋಪಿತರು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತೆಂದು ದೃಢೀಕರಿಸಿರುತ್ತೇನೆ.)

ದಿನಾಂಕಃ 07.10.2022

(ಸುರೇಶ.ಎಸ್.ಎನ್.)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ಹೆಚ್.ಡಿ. ಕೋಟೆ.